ಸಿಸಿ ನಂಃ 51/2016 ಪಿ.ಡಬ್ಲ್ಯೂ-1

**ದಿನಾಂಕಃ 13.10.2025 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

ಮುಂದುವರೆದ ಪಾಟೀ ಸವಾಲು ಃ ಆರೋಪಿ ಪರ ಶ್ರೀ.ಕೆ.ಎನ್.ಎಸ್ ವಕೀಲರಿಂದ ಃ

ನಾನು ಕೆ.ಆರ್ ಪೇಟೆಯಲ್ಲಿ 15 ವರ್ಷಗಳಿಂದ ವಾಸ ಇರುತ್ತೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. ನಾನು ಕೆ.ಆರ್ ಪೇಟೆ ನ್ಯಾಯಾಲಯದಲ್ಲಿ ಸುಮಾರು 20 ಕೇಸುಗಳನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಸಿಸಿ 168/2016 ಚರಣ್ ಎನ್ನುವವರ ವಿರುದ್ಧ, ಸಿಸಿ 586/2018 ಹೆಚ್. ಎನ್. ಸುಧಾ ಎನುವವರ ವಿರುದ್ಧ, ಸಿಸಿ 167/2020 ಹೆಚ್. ಕೆ ಮಂಜೇಗೌಡ ಎನ್ನುವವರ ವಿರುದ್ಧ, ಸಿಸಿ 1046/2022 ರವಿಕುಮಾರ ಎನ್ನುವವರ ವಿರುದ್ದ, ಸಿಸಿ 321/2021 ಎನ್. ಬಿ. ಕುಮಾರ ಎನುವವರ ವಿರುದ್ಧ, ಸಿಸಿ 573/2015 ಮಹಾದೇವೆಗೌಡ ಎನುವವರ ವಿರುದ್ಧ, ಸಿಸಿ 572/2015 ರಾಮಚಂದ್ರು ಎನುವವರ ವಿರುದ್ಧ, ಅಲ್ಲದೆ ಅಮಲ್ಜಾರಿ ಸಂಖ್ಯೆ 06/2015 ಆರ್ ಧಯಾನಂದ ಎನ್ನುವವರ ವಿರುದ್ಧ, ಅಮಲ್ಜಾರಿ ಸಂಖ್ಯೆ 93/2022 ಆರ್.ಕೆ. ಶ್ರೀನಿವಾಸ ಎನ್ನುವವರ ವಿರುದ್ಧ ಅಸಲು ದಾವಾ ಸಂಖ್ಯೆ 453/2020 ಹೆಚ್ ಎಸ್ ರವಿಕುಮಾರವರ ವಿರುದ್ಧ, ಅಸಲು ದಾವಾ ಸಂಖ್ಯೆ 487/2014 ಬಲರಾಮ ಎನ್ನುವವರ ವಿರುದ್ಧ, ಅಸಲು ದಾವಾ ಸಂಖ್ಯೆ 561/2014 ಲಿಂಗರಾಜು ಎನ್ನುವವರ ವಿರುದ್ಧ, ಅಸಲು ದಾವಾ ಸಂಖ್ಯೆ 61/2014, ಮಿಸ್ 09/2022 ರೇಣುಕಾ ಎನ್ನುವವರ ವಿರುದ್ಧ ಇದೇ ನ್ಯಾಯಾಲಯದಲ್ಲಿ ದಾಖಲು ಮಾಡಿರುತ್ತೇನೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸದರಿ ಪ್ರಕರಣಗಳು ಹಣವನ್ನು ಹಿಂದಿರುಗಿಸಿರುವ ಕಾರಣ ವಜಾಗೊಂಡಿದ್ದು, ಸಿವಿಲ್ ಸ್ವರೂಪದ ದಾವೆಗಳು ಜಮೀನಿನ ವಿಚಾರವಾಗಿ ದಾಖಲು ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

2. ನಾನು 2013 ರಿಂದ ಆದಾಯ ತೆರಿಗೆ ಪಾವತಿ ಮಾಡುತ್ತಿದ್ದೇನೆ. ಆರೋಪಿಗೆ ಸಾಲ ನೀಡಿರುವ ವಿಚಾರವಾಗಿ ಆದಾಯ ತೆರಿಗೆ ಅರ್ಜಿಯಲ್ಲಿ ಹೇಳಿರುವುದಿಲ್ಲ. ಆದಾಯ ತೆರಿಗೆ ರಶೀದಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಲು ತೊಂದರೆ ಇರುವುದಿಲ್ಲ. ಆರೋಪಿ ಏಪ್ರಿಲ್ 2013 ರ ಕೊನೆಯ ವಾರದಲ್ಲಿ ನನ್ನಿಂದ ಹಣವನ್ನು ಪಡೆದುಕೊಂಡಿರುತ್ತಾರೆ. ನಿರ್ದಿಷ್ಟವಾದ ದಿನಾಂಕ ನೆನಪಿರುವುದಿಲ್ಲ. ಆರೋಪಿಗೆ ಹಣವನ್ನು ನೀಡುವಾಗ ನಾನು, ನನ್ನ ತಾಯಿ ಇದ್ದೇವು. ನನ್ನ ಮನೆಯಲ್ಲಿ ರೂ. 1,20,000/- ಗಳನ್ನು ನೀಡಿರುತ್ತೇನೆ. ಎಳನೀರಿನ ಮಾರಾಟದಿಂದ ಬಂದ ಆದಾಯವನ್ನು ಆರೋಪಿಗೆ ನೀಡಿರುತ್ತೇನೆ. ನನ್ನ ಜಮೀನಿನ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುವುದಿಲ್ಲ.

3. ಆರೋಪಿ ನೀಡಿದ ಚೆಕ್ಕನ್ನು ಕೆನರಾ ಬ್ಯಾಂಕಿಗೆ ಹಾಜರು ಮಾಡಿರುತ್ತೇನೆ. ಆರೋಪಿ ಪೋಸ್ಟ್ ಆಫೀಸನ ಚೆಕ್ಕನ್ನು ನೀಡಿರುತ್ತಾರೆ. ನನ್ನ ಅಣ್ಣ ಇಂದುಕುಮಾರ ಎನ್ನುವವರು ಪೋಸ್ಟ್ ಆಫೀಸ್ ನಲ್ಲಿ ಕೆಲಸ ಮಾಡುತ್ತಾರೆ.

4. ಚೆಕ್ಕ್ ಬ್ಯಾಂಕಿನಲ್ಲಿ ಇನ್ ಸಫಿಸಿಯಂಟ್ ಫಂಡ್(Insufficient fund) ಎಂದು ಹಿಂಬರಹ ಬಂದಿರುತ್ತದೆ. ಸಾಮಾನ್ಯವಾಗಿ ಬ್ಯಾಂಕಿನಿಂದ ಹಿಂಬರಹ ನೀಡಿದಾಗ ಸದರಿ ದಿನಾಂಕ, ಬ್ಯಾಂಕಿನ ಸೀಲ್ ಹಾಗೂ ಸಹಿಯನ್ನು ಹಾಕಿ ನೀಡುತ್ತಾರೆ ಎಂದರೆ ಸರಿ. ಸಾಕ್ಷಿಗೆ ನಿಪಿ 2 ನ್ನು

ತೋರಿಸಲಾಗಿ ಅದರಲ್ಲಿ ದಿನಾಂಕವನ್ನು ನಮೂದು ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ.

5. ದಿನಾಂಕ 14.08.2013 ರಲ್ಲಿ ನೋಟಿಸನ್ನು ನೀಡಿರುತ್ತೇನೆ. ಸದರಿ ನೋಟಿಸ್ ಊರಿನಲ್ಲಿ ಇರಲಿಲ್ಲ ಎಂದು ಹಿಂಬರಹ ಬಂದಿರುತ್ತದೆ. ಸಾಕ್ಷಿಯು ಮುಂದುವರೆದು ನಾಟ್ ಕ್ಲೇಮಡ್ ಎಂದು ಬಂದಿರುತ್ತದೆ ಎಂದು ನುಡಿಯುತ್ತಾರೆ. ಸದರಿ ನೋಟಿಸ್ಸು ಊರಿನಲ್ಲಿ ವಾಸ ಇರುವುದಿಲ್ಲ ಎಂದು ವಾಪಸ್ಸಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿ 2008 ರಿಂದ 2022 ರವರೆಗೆ ಮೈಸೂರಿನಲ್ಲಿ ವಾಸ ಇರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಕೆ.ಆರ್. ಪೇಟೆಯಲ್ಲಿ ವಾಸ ಇದ್ದು, ನನ್ನ ತಂಗಿಯ ಜಮೀನಿನ ಪಕ್ಕದಲ್ಲಿ ಅವರ ಜಮೀನು ಇದ್ದು, ನಾನು ಅವರನ್ನು ಭೇಟಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ.

6. ಆರೋಪಿ ಮೈಸೂರಿನ ನಜರ್ ಬಾದಿನಲ್ಲಿ ಟೂರ್ಸ್ ಎಂಡ್ ಟ್ರಾವೇಲ್ಸ್ ವ್ಯವಹಾರ ಮಾಡುತ್ತಿದ್ದು, 2021 ರವರೆಗೂ ಮೈಸೂರಿನಲ್ಲಿ ವಾಸ ಇದ್ದರು ಎಂದರೆ ಸರಿಯಲ್ಲ.

ಮುಂದುವರೆದ ಪಾಟೀ ಸವಾಲು ಃ ಆರೋಪಿಯ ಪರ ವಕೀಲರು ಸಮಯಾವಕಾಶ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಸಾ ಓ ಹೇ ಕೇ ಸ ಅದೆ.

1 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾ.
ದಂಡಾಧಿಕಾರಿಗಳು, ಕೃಷ್ಣರಾಜಪೇಟೆ.